## ಅರೆಮಾನವರ ಜೊತೆ ಮರಳಿ ಮುಖಾಮುಖಿ

ಸ್ವಾಗತಕಾರಿಣಿಯ ಬದಿಯಲ್ಲಿ ಡಿಜಿಟಲ್ ಸ್ಕ್ರೀನ್ ಮೇಲೆ ಮೂಡಿದ ವಿವಿಧ ವಿಭಾಗಗಳೆಡೆ ಕಣ್ಣೋಡಿಸಿದಳು. ಸಂಶೋಧನೆ ಹಾಗೂ ತಯಾರಿಕೆಯ ವಿಭಾಗಗಳು ಆ ವಿಶಾಲ ಆವರಣದೊಳಗೆ ಸ್ಥಾಪಿತವಾಗಿವೆ ಎಂದು ತಿಳಿದಿದ್ದರೂ ಎಲ್ಲೂ ಅದರ ಹೆಸರು ಪ್ರತಿಫಲಿತವಾಗದಿದ್ದರಿಂದ ಈ ಕೇಂದ್ರ ಕೇವಲ ರೊಬೋ ದುರಸ್ತಿಗೆ ಮೀಸಲಾಗಿರಬೇಕೆಂದು ಭಾವಿಸಿದಳು.

ಅವಳು ನೋಡ ನೋಡುತ್ತಿದ್ದಂತೆಯೇ ಅವಿರತ್ ಒಳ ಕಾಲಿರಿಸಿದ್ದ. ಹನ್ನಾಳನ್ನು ಕಾಣುತ್ತಲೇ ಕೈ ಬೀಸಿ ಮೊದಲು ರೊಬೋ ಸ್ವಾಗತಕಾರಿಣಿಗೆ ತನ್ನ ವಿವರಗಳು ಹಾಗೂ ತಾನು ಬಂದ ಮಾಹಿತಿ ನೀಡಿದ್ದ. ಆ ಸ್ವಾಗತಕಾರಿಣಿ ಅವನು ತನ್ನ ಡಿಜಿ ನೋಟಲ್ಲಿ ನೀಡಿದ ಮಾಹಿತಿಯನ್ನು ಕಣ್ಣಿನಿಂದಲೇ ಗ್ರಹಿಸಿ ತನ್ನೊಳಗೆ ಅಡಕವಾಗಿದ್ದ ವ್ಯವಸ್ಥೆಯಲ್ಲಿ ಹುಡುಕಿ ಅದರ ವಿವರ ನೀಡಿತ್ತು.

‘ಮಿ. ಅವಿರತ್. ನಿಮ್ಮ ರೊಬೋಗಳನ್ನು ವಿತರಣಾ ಕೌಂಟರ್‌ನಲ್ಲಿ ಪಡೆಯಬಹುದು.’

